**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ದಿನಾಂಕಃ 05.08.2024</u>**

**<u>ಪ್ರಮಾಣಿಕೃತ ಹೇಳಿಕೆಃ ಫಿರ್ಯಾದುದಾರರ ಪರ ವಕೀಲರಿಂದ</u>**

ನನ್ನ ಹೇಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಪ್ರಮಾಣ ಪತ್ರವನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ.

2. ಆರೋಪಿ ಮತ್ತು ನನ್ನ ನಡುವೆ ಆದ ವ್ಯವಹಾರದ ಬಾಬ್ತು, ಆರೋಪಿ ಕೊಟ್ಟ ಚೆಕ್ ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ಗುರುತಿಸುತ್ತೇನೆ. ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಯಿತು.

3. ನಗದೀಕರಣಕ್ಕಾಗಿ ಹಾಜರುಪಡಿಸಿದ ಚೆಕ್ಕು ಅಮಾನ್ಯಗೊಂಡು ವಾಪಸ್ಸಾಗಿದ್ದು ಬ್ಯಾಂಕಿನವರು ನೀಡಿದ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು.

4. ನಂತರ ನನ್ನ ವಕೀಲರ ಮೂಲಕ ಆರೋಪಿಗೆ ದಿಃ20.03.2024 ರಂದು ನೊಂದಾಯಿತ ಅಂಚೆ ಮೂಲಕ ಕಳುಹಿಸಿದ ಕಾನೂನು ತಿಳುವಳಿಕೆ ಪತ್ರದ ಕಛೇರಿ ಪ್ರತಿಹಾಜರುಪಡಿಸಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು.

5. ಅಂಚೆ ರಶೀದಿ ಹಾಜರುಪಡಿಸಿದ್ದು ನಿ.ಪಿ.4 ಎಂದು ಗುರುತಿಸಲಾಯಿತು.

6. ಪೋಸ್ಟಲ್ ಟ್ರಾಕ್ ಕಂಸೈನ್ಮೆಂಟ್ ಹಾಜರುಪಡಿಸಿದ್ದು ನಿ.ಪಿ.5 ಎಂದು ಗುರುತಿಸಿಕೊಳ್ಳಲಾಯಿತು.

7. ಬಿಸಿನೆಸ್ ಸೇಲ್ ಅಗ್ರಿಮೆಂಟ್ ಅನ್ನು ಹಾಜರುಪಡಿಸಿದ್ದು ನಿ.ಪಿ.6 ಎಂದು ಗುರುತಿಸಲಾಯಿತು.

ಪಿರ್ಯಾದಿಯು ವಿನಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**(ಹೆಚ್.ಪಿ.ಮೋಹನ್ ಕುಮಾರ್)**
**6 ನೇ ಎ.ಎಸ್.ಸಿ.ಜೆ ಮತ್ತು ಎ.ಸಿ.ಜೆ.ಎಮ್,**
**ಬೆಂಗಳೂರು**